ಡಾ. ಸಿ. ನಾರಾಯಣನ್ ಕುಟ್ಟಿ. ಕಳೆದೊಂದು ದಶಕದಲ್ಲಿ ಚಳಿಗಾಲದ ಹೂಕೋಸು–ಎಲೆಕೋಸು ಕೃಷಿ ರಾಜ್ಯವಿಡೀ ಹಬ್ಬಿದೆ. ಸರ್ಕಾರಿ ಇಲಾಖೆಗಳು ಇದಕ್ಕೆ ಸೂಕ್ತವಾದ ತಳಿಗಳ ಪ್ರೋ–ಟ್ರೇ ಮಾಡಿ ವಿತರಿಸುತ್ತಿವೆ. ನಗರ–ಹಳ್ಳಿಗಳಲ್ಲಿ ಜನ ನೆಲ ಅಥವಾ ಗ್ರೋ ಬ್ಯಾಗುಗಳಲ್ಲಿ ಇನಿತೂ ವಿಷ ಬಳಸದೆ ಇವನ್ನು ಬೆಳೆಯುವುದರಲ್ಲಿ ಗೆದ್ದಿದ್ದಾರೆ. ಬರಬರುತ್ತಾ ಅಲ್ಲಿಲ್ಲಿ ಈ ಎರಡು ಬೆಳೆಗಳನ್ನು ವಾಣಿಜ್ಯ ಮಟ್ಟದಲ್ಲೂ ಬೆಳೆಯತೊಡಗಿದ್ದಾರೆ.

ಈ ಕಸಿ ವಿದ್ಯೆ ಕೇರಳದಲ್ಲಿ ವಿಷರಹಿತ ಟೊಮೆಟೊ ಕೃಷಿಗೆ ಭಾರೀ ಅವಕಾಶ ಸೃಷ್ಟಿಸಬಹುದಾದದ್ದು. ಆದರೆ ಏಕೋ ಏನೋ, ಕಳೆದ ನಾಲ್ಕು ವರ್ಷಗಳಲ್ಲಿ ಇದಕ್ಕೆ ಸಿಗಬೇಕಾಗಿದ್ದಷ್ಟು ಪ್ರಚಾರ ಸಿಕ್ಕಿಲ್ಲ. ಕಸಿ ಗಿಡ ತಯಾರಿ ಬಗ್ಗೆ ಹೆಚ್ಚಿನ ತರಬೇತಿಗಳೂ ಆಗಿಲ್ಲ. ಈ ಕಾರಣದಿಂದ ಕೇಕೃವಿ ಬಿಟ್ಟರೆ ಕೇರಳದ ಬೇರೆಲ್ಲೂ ಕೃಷಿಕರಿಗೆ ಕಸಿ ಟೊಮೆಟೊ ಗಿಡ ಸಿಗುತ್ತಿಲ್ಲ.

ರಾಜ್ಯದಲ್ಲಿ ತರಕಾರಿ ಕೃಷಿಸಂಬಂಧಿ ದಿಗ್ಗಜ ಸರ್ಕಾರಿ ಸಂಸ್ಥೆ 'ವಿಎಫ್‌ಪಿಸಿಕೆ' (ವೆಜಿಟೇಬಲ್ ಅಂಡ್ ಫ್ರುಟ್ ಪ್ರೊಮೋಶನ್ ಕೌನ್ಸಿಲ್ ಆಫ್ ಕೇರಳ) ಇದೆ. ಇದು ಕೇಕೃವಿಯಿಂದ ಟೊಮೆಟೊ ಕಸಿ ಗಿಡ ತಯಾರಿಯ ತರಬೇತಿ ಪಡೆದಿದ್ದರು. ಈ ವಿದ್ಯೆಯಿಂದ ಕೃಷಿಕರಿಗೆ ಹೆಚ್ಚು ಆದಾಯ ಬರುವಂತೆ ಮಾಡಲೂ ಸಾಧ್ಯವಿತ್ತು. ದುರದೃಷ್ಟವಶಾತ್, 'ವಿಎಫ್‌ಪಿಸಿಕೆ' ಎಲ್ಲೂ ಕಸಿ ಗಿಡಗಳ ಉತ್ಪಾದನೆಯನ್ನೇ ಮಾಡುತ್ತಿಲ್ಲ!

## ಕಾಸರಗೋಡು ತಲುಪಿದ ಕಸಿ ವಿದ್ಯೆ

ಕಳೆದ ವರ್ಷ ಕೇಕೃವಿಯಿಂದ ಟೊಮೆಟೊ ಕಸಿ ಗಿಡ ತಯಾರಿ ತರಬೇತಿ ಪಡೆದವರಲ್ಲಿ ಕೆ. ಮಣಿಕಂಠನ್ ಒಬ್ಬರು. ಇವರು ಕಾಸರಗೋಡಿನ ಸಿಪಿಸಿಆರ್‌ಐ ಕೇವೀಕೆಯ ಹಿರಿಯ ತಾಂತ್ರಿಕ ಅಧಿಕಾರಿ. ತರಬೇತಿ ಮುಗಿಸಿ ಬಂದವರೇ ನಗರದ ಆಯ್ದ ಹತ್ತು ಮನೆಯವರಿಗೆ ಈ ವಿದ್ಯೆ ಕಲಿಸಿಕೊಟ್ಟರು. ಮೂವತ್ತು ಗ್ರೋ ಬ್ಯಾಗುಗಳಲ್ಲಿ ನೆಡಲು ತಲಾ ಹತ್ತುಹತ್ತು ಟೊಮೆಟೊ, ಬದನೆ ಮತ್ತು ಹಸಿಮೆಣಸಿನ ಕಸಿ ಗಿಡ ಕೊಟ್ಟರು. ಕಳೆದ ವರ್ಷ ಹವಾಮಾನ ಬದಲಾವಣೆಯಿಂದಾಗಿ ಬೇಸಿಗೆ ಹೆಚ್ಚು ಕಠಿಣವಾಗಿತ್ತು. ಆದರೂ ಟೊಮೆಟೊ ಗಿಡಗಳಲ್ಲಿ ಒಳ್ಳೆಯ ಫಸಲು ಬಂದಿದೆಯಂತೆ. 'ಈ ವರ್ಷ ಮತ್ತೆ ಆ ಕುಟುಂಬಗಳಿಗೆ ಕಸಿ ಗಿಡ ಒದಗಿಸಲಿದ್ದೇವೆ' ಎನ್ನುತ್ತಾರೆ. ಕಾಸರಗೋಡು ಕೃಷಿ ವಿಜ್ಞಾನ ಕೇಂದ್ರ (ಕೇವೀಕೆ) ಟೊಮೆಟೊದ ಕಸಿ ವಿದ್ಯೆಯ ವಿಚಾರದಲ್ಲಿ ಎರಡು ಚಟುವಟಿಕೆಗಳಿಗೆ ಸಜ್ಜಾಗಿ ನಿಂತಿದೆ. ಒಂದು: ನಿರ್ದಿಷ್ಟ ಆದೇಶದ ಮೇಲೆ ಸೀಮಿತ ಸಂಖ್ಯೆಯ ಕಸಿ ಗಿಡ ತಯಾರಿಸಿ ಒದಗಿಸುವುದು. ಎರಡು: ಆಸಕ್ತ ಅಭ್ಯರ್ಥಿಗಳು ಮುಂದೆಬಂದರೆ ತಮ್ಮ ಕೇಂದ್ರದಲ್ಲೇ ಕಸಿ ಗಿಡ ತಯಾರಿಯ ಬಗ್ಗೆ ತರಬೇತಿ ಒದಗಿಸುವುದು. 'ಕೃಷಿಕರಿಗೆ ಪ್ರಯೋಜನವಾಗುವುದಾದರೆ ನಾವಿದನ್ನು ಸಂತೋಷದಿಂದ ಮಾಡಲು ತಯಾರು ಎನ್ನುತ್ತಾರೆ' ಈ ಕೇವೀಕೆಯ ಪ್ರಧಾನ ವಿಜ್ಞಾನಿ ಡಾ. ಟಿ.ಎಸ್. ಮನೋಜ್ ಕುಮಾರ್.



ಕೇಕೃವಿಯ ಮೂವರು ಸಿಬ್ಬಂದಿ ಸೇರಿ ದಿನಕ್ಕೆ 2,000 ಕಸಿ ಗಿಡ ಉತ್ಪಾದಿಸಬಲ್ಲರು.

ಇವರು ಬದನೆ ಗಿಡದ ಬದಲಿಗೆ ಕೇಕೃವಿಯ 'ಹರಿತ' ಎಂಬ ಬದನೆಯ ತಳಿಯ ಅಡಿ ಗಿಡ ಬಳಸುತ್ತಾರೆ. ಕೇಕೃವಿಯ ಸಲಹೆಯಂತೆ ಇದನ್ನು ಆಯ್ದುಕೊಂಡಿದ್ದಾರಂತೆ. ಮೊದಲಿಗೆ ಪ್ರೋ ಟ್ರೇಗಳಲ್ಲಿ ಅಡಿ ಗಿಡದ ಬೀಜ ಬಿತ್ತಬೇಕು. ಅವು ಕಸಿ ಕಟ್ಟುವಷ್ಟು ದೊಡ್ಡದಾಗಬೇಕಾದರೆ ಒಂದೂವರೆ ತಿಂಗಳು ಬೇಕು.

'ಈ ಅಡಿ ಗಿಡಕ್ಕೆ ಕಸಿ ಮಾಡಿ ಗ್ರಾಹಕ ಕೃಷಿಕ ತನಗೆ ಇಷ್ಟವಾದ ಟೊಮೆಟೊ, ಬದನೆ, ದೊಣ್ಣೆ ಮೆಣಸು ಅಥವಾ ಹಸಿಮೆಣಸಿನ ತಳಿಗಳನ್ನು ಬೆಳೆಸಿ ಕೃಷಿ ಮಾಡಬಹುದು. ಕಸಿ ಕುಡಿಯಾಗಿ ಬಳಸುವ ಗಿಡವನ್ನೂ ಹೀಗೆಯೇ ಪ್ರೋ–ಟ್ರೇಗಳಲ್ಲಿ ಸಕಾಲಕ್ಕೆ ಬಿತ್ತಬೇಕು. ಕಸಿ ಕಟ್ಟಲು 20ರಿಂದ 25 ದಿನಗಳ ಸಯಾನ್ ( ಕಸಿ ಕುಡಿ) ಸರಿಯಾದುದು ಎನ್ನುತ್ತಾರೆ' ಮಣಿಕಂಠನ್.

ಅಡಿ ಗಿಡ ಪ್ರೋ ಟ್ರೇಯಲ್ಲಿದ್ದಾಗಲೇ ಅದಕ್ಕೆ ಮೆದು ಕಾಂಡ ಕಸಿ ಮಾಡುತ್ತಾರೆ. ಮಾವಿನಂತಹ ಗಟ್ಟಿ ಕಾಂಡದ ಗಿಡಗಳಿಗೆ ಕಸಿ ಮಾಡಿದ ನಂತರ ಸುತ್ತಲೂ ಪ್ಲಾಸ್ಟಿಕ್ ಟೇಪ್ ಸುತ್ತುತ್ತಾರೆ. ಟೊಮೆಟೊ ವರ್ಗದ ಎಳೆ ಗಿಡಗಳಿಗೆ ಈ ಪ್ಲಾಸ್ಟಿಕ್ ಟೇಪ್ ಹೊಂದಿಕೆಯಾಗುವುದಿಲ್ಲ. ಇದಕ್ಕಾಗಿಯೇ ಮಾಡಿದ ಚಿಕಣಿ ಕ್ಲಿಪ್ಪುಗಳು ಮಾರುಕಟ್ಟೆಯಲ್ಲಿ ಸಿಗುತ್ತವೆ. ಕಸಿ ಮಾಡಿದ ಕೂಡಲೇ, ಜೋಡಿಸಿದ ಭಾಗಕ್ಕೆ ಈ ಕ್ಲಿಪ್ ಹಾಕಬೇಕು. ಸಾಮಾನ್ಯವಾಗಿ ಕಸಿ ಕೂಡಿಕೊಳ್ಳಲು ಒಂದು ವಾರ ತೆಗೆದುಕೊಳ್ಳುತ್ತದೆ. ಕಸಿ ಮಾಡಿದ ಭಾಗ ಚೆನ್ನಾಗಿ ಕೂಡಿಕೊಂಡ ಮೇಲಷ್ಟೇ ಇದನ್ನು ತೆಗೆಯುತ್ತಾರೆ. ಈ ಕ್ಲಿಪ್ಪನ್ನು ಹಲವಾರು ಬಾರಿ ಮರು ಉಪಯೋಗ ಮಾಡಬಹುದು.



ಡಾ.ಸಿ. ನಾರಾಯಣ ಕುಟ್ಟಿ

## ಬಿತ್ತನೆಯಿಂದ ವಿತರಣೆಗೆ ಎರಡೂವರೆ ತಿಂಗಳು

ಕಸಿ ಕಟ್ಟಿದ ಕೂಡಲೇ, ಗಿಡವನ್ನು ನೇರವಾಗಿ ಹೊರ ವಾತಾವರಣಕ್ಕೆ ಒಡ್ಡುವಂತಿಲ್ಲ. ಅದನ್ನು 'ತೇವದ ಕೋಣೆ' (ಮಿಸ್ಟ್ ಚೇಂಬರ್)ಯಲ್ಲಿ ಇಟ್ಟು ಆಗಾಗ ನೀರು ಚಿಮುಕಿಸುತ್ತಿರಬೇಕು. ತಂಪು ಕೋಣೆಯಲ್ಲಿ ಒಂದು ವಾರ ಕಳೆದ ಮೇಲೆ ಗಿಡವನ್ನು ಇನ್ನೊಂದು ನೆರಳಿನ ಕೋಣೆಗೆ ವರ್ಗಾಯಿಸಬೇಕು. ಈಗಲೂ ಅದು ಹೊರಪ್ರಪಂಚಕ್ಕೆ ಇಣುಕುವಷ್ಟು ಗಟ್ಟಿಮುಟ್ಟಾಗಿರುವುದಿಲ್ಲ. ಕಸಿ ಮಾಡಿ ಒಂದು ತಿಂಗಳ ಕಾಲ ತಂಪು ಕೋಣೆ, ನೆರಳಿನ ಕೋಣೆಗಳ ವಾಸದ ನಂತರವೇ ಅದನ್ನು ಹೊರಗೆ ನೆಡಬಹುದು. ಸಾಮಾನ್ಯವಾಗಿ ಅಡಿ ಗಿಡದ ಬೀಜ ಬಿತ್ತಿದಂದಿನಿಂದ ಕಸಿಗಿಡದ ಹೊರಪ್ರಪಂಚ ದರ್ಶನಕ್ಕೆ ಎರಡೂವರೆ ತಿಂಗಳು ಬೇಕು.

ಸಾಮಾನ್ಯವಾಗಿ ಟೊಮೆಟೊ ನಾಲ್ಕು ತಿಂಗಳ ಬೆಳೆ. ನವೆಂಬರಿನಿಂದ ಜನವರಿ ತಿಂಗಳವರೆಗೆ ನೆಡಲು ಸಕಾಲ. ಫೆಬ್ರುವರಿಯ ನಂತರ ಬೇಡ. ಸೀಸನಿನ ದೃಷ್ಟಿಯಿಂದ ಕಾಸರಗೋಡು ಹವಾಮಾನದಲ್ಲಿ ಅಕ್ಟೋಬರ್ 15ಕ್ಕೆ ಗಿಡ ನೆಟ್ಟು ತಯಾರು ಮಾಡುವುದು ಅತ್ಯುತ್ತಮ. 'ಸರಿಯಾದ ನಿರ್ವಹಣೆ ಇದ್ದರೆ ಯಾವುದೇ ರಸವಿಷ ಬಳಸದೇನೇ ಒಳ್ಳೆ ಟೊಮೆಟೊ ಬೆಳೆ ಪಡೆಯಲು ಬರುತ್ತದೆ' ಎನ್ನುತ್ತಾರೆ ಮಣಿಕಂಠನ್.

ದಕ್ಷಿಣ ಕನ್ನಡ, ಕಾಸರಗೋಡು ಜಿಲ್ಲೆಗಳಲ್ಲಿ ಬಾಡುರೋಗ ಬಾರದಿದ್ದರೆ, ಟೊಮೆಟೊ ಬೆಳೆಸಬಯಸುವ ಸಾಕಷ್ಟು ಗೃಹಿಣಿಯರೂ